# ತ್ರಿಮುಖ



■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

ಹಿಮಾಲಯದ ಅರಣ್ಯವೊಂದರಲ್ಲಿ ತ್ರಿಮುಖನೆಂಬ ಅಸುರನಿದ್ದ. ಅವನಿಗೆ ಆ ಹೆಸರು ಬರಲು ಕಾರಣ ಅವನಿಗೆ ಮೂರು ತಲೆಗಳಿದ್ದವು. ಮಹಾನ್ ಶಕ್ತಿಶಾಲಿಯೂ, ಬೃಹದಾಕಾರವಾಗಿಯೂ ಬೆಳೆದಿದ್ದ. ಸ್ವಭಾವತಃ ಅವನು ತುಂಬ ದುಷ್ಟನಾಗಿದ್ದ. ಋಷಿಗಳ ತಪಸ್ಸು, ಯಜ್ಞ, ಯಾಗಾದಿಗಳಿಗೆ ವಿಘ್ನವೊಡ್ಡಿ ಭಗ್ನಗೊಳಿಸುವುದೆಂದರೆ ಅವನಿಗೆ ವಿಪರೀತ ಆನಂದ. ಸುತ್ತಮುತ್ತಲ ಪ್ರದೇಶಗಳ ಋಷಿಗಳೂ, ಸಾಮಾನ್ಯ ಜನರೂ ಅವನ ಹೆಸರು ಕೇಳಿದರೇ ಹೆದರಿ ನಡುಗುತ್ತಿದ್ದರು.

ಅವನಿಗೆ ತ್ರಿಲೋಕಗಳಲ್ಲಿಯೂ ಸಂಚರಿಸುವ ವಿಶೇಷ ಶಕ್ತಿಯಿತ್ತು. ಒಮ್ಮೆ ಬೇರೆ ಲೋಕದಲ್ಲಿ ಸಂಚರಿಸುತ್ತಾ, ಬ್ರಹ್ಮಲೋಕದ ಕಡೆ ಬಂದು ಅಲ್ಲಿ ಸಾಕ್ಷಾತ್ ಬ್ರಹ್ಮದೇವನನ್ನು ಕಂಡ. ಬ್ರಹ್ಮನಿಗೆ ತನಗಿಂತಲೂ ಒಂದು ತಲೆ ಹೆಚ್ಚಿರುವುದನ್ನು ಕಂಡು ಆವನಿಗೆ ಆಶ್ಚರ್ಯದ ಜೊತೆಗೆ ಅಸೂಯೆಯೂ ಅಯಿತು. ತನ್ನ ಪೂರ್ವಜ ರಾವಣನಿಗೆ ಹತ್ತು ತಲೆಯಿದ್ದುದು ಬಿಟ್ಟರೆ ಒಂದಕ್ಕಿಂತ ಹೆಚ್ಚು ತಲೆಗಳಿದ್ದುದು ತನಗೆ ಮಾತ್ರ ಎಂದುಕೊಂಡಿದ್ದ. ಈಗ ನೋಡಿದರೆ ತನ್ನನ್ನು ಮೀರಿಸುವವ ಮತ್ತೊಬ್ಬನಿದ್ದಾನೆ ಎಂದು ಗೊತ್ತಾಗಿ ಉಗ್ರ ಕೋಪ ಬಂದು ಬ್ರಹ್ಮನ ಮೇಲೆ ಯುದ್ಧ ಮಾಡಲು ನಿರ್ಧರಿಸಿ ತನ್ನ ಬೃಹತ್ ಗದೆಯನ್ನು ಝಳಪಿಸುತ್ತ ಆರ್ಭಟಿಸಿದ. ಆದರೆ ಅವನ ಕೂಗು ಬ್ರಹ್ಮನವರೆಗೆ ತಲುಪಲೇ ಇಲ್ಲ.

ಅದೇ ಮಾರ್ಗವಾಗಿ ತನ್ನ ತಂದೆ ಬ್ರಹ್ಮನನ್ನು ನೋಡಲು ಬರುತ್ತಿದ್ದ ನಾರದ ತ್ರಿಮುಖನನ್ನು ನೋಡಿ 'ಏನು ತ್ರಿಮುಖ, ಬಹಳ ಕೋಪದಲ್ಲಿರುವಂತಿದೆ. ಏನು ಸಮಾಚಾರ? ಭೂಲೋಕವನ್ನು ಬಿಟ್ಟು ಇಲ್ಲೇನು ಮಾಡುತ್ತಿರುವೆ? ನೀನಿಲ್ಲದೆ ಭೂಲೋಕದಲ್ಲಿ ನೆಮ್ಮದಿಯಿಂದ ಯಜ್ಞ, ಯಾಗಾದಿಗಳನ್ನು ನಿರ್ವಿಘ್ನವಾಗಿ ಮಾಡುತ್ತಿದ್ದಾರೆ' ಎಂದ. ಆಗ ತ್ರಿಮುಖ 'ಈಗ ಆ ಋಷಿಗಳ ತಪಸ್ಸು, ಯಜ್ಞಗಳನ್ನು ಹಾಳುಮಾಡುವುದು ನನಗೆ ಮುಖ್ಯವಲ್ಲ. ಅಗೋ, ಅಲ್ಲಿ ಕಾಣುತ್ತಿದ್ದಾನಲ್ಲ ಅವನು ಬ್ರಹ್ಮನಂತೆ. ಅವನಿಗೆ ನನಗಿಂತ ಒಂದು ತಲೆ ಜಾಸ್ತಿಯಿದೆ. ಇದನ್ನು ಸಹಿಸಲು ನನಗೆ ಸಾಧ್ಯವಾಗುತ್ತಿಲ್ಲ. ಅವನ ಎರಡು ಅಥವಾ ಮೂರು ತಲೆಗಳನ್ನು ಕತ್ತರಿಸಿ ನನ್ನ ಹಿರಿಮೆ ಹೆಚ್ಚು ಮಾಡಿಕೊಳ್ಳಬೇಕು. ಅದಕ್ಕಾಗಿ ಬ್ರಹ್ಮನ ಮೇಲೆ